ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಬುಧವಾರ, ದಿನಾಂಕ **:** 03 ನೇ ಫೆಬ್ರುವರಿ, 2021

ಸಣ್ಣ ಬಂದರು, ಒಳನಾಡು ಜಲ ಸಾರಿಗೆ ಮತ್ತು ಕಡಲು ತೀರಗಳ ಅಭಿವೃದ್ಧಿ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-

304 (304) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಣ್ಣ ಬಂದರು, ಒಳನಾಡು ಜಲ ಸಾರಿಗೆ ಮತ್ತು ಕಡಲ ತೀರಗಳ ಅಭಿವೃದ್ಧಿ ಬೆಳವಣಿಗೆಗೆ The Karnataka Maritime Board ನ್ನು ಸ್ಥಾಪಿಸಲಾಗಿದೆಯೇ; ಹಾಗೂ ಈ ಬೋರ್ಡ್‌ಗೆ ಪದಾಧಿಕಾರಿಗಳನ್ನು ನೇಮಿಸಲಾಗಿದೆಯೇ; (ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಒಟ್ಟು ಬೃಹತ್ ಮತ್ತು ಸಣ್ಣ ಬಂದರುಗಳೆಷ್ಟು; ಈ ಬಂದರುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯಾವುದಾದರೂ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದೆಯೇ; ಒಂದು ವೇಳೆ ತಯಾರಿಸಿದ್ದರೆ, ಈ ಯೋಜನೆಯನ್ನು ಯಾವ ಸಂಸ್ಥೆಯಿಂದ ತಯಾರಿಸಲಾಗಿದೆ; ಈ ಯೋಜನಾ ವರದಿಯ ಸಂಕ್ಷಿಪ್ತ ವಿವರ ನೀಡುವುದು;

(ಇ) ಕೇಂದ್ರ ಸರ್ಕಾರದ `ಸಾಗರ ಮಾಲಾ ಯೋಜನೆ' ಯಡಿ ಯಾವ ಯಾವ ಬಂದರುಗಳನ್ನು ಮತ್ತು ಕಡಲ ತೀರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ? (ವಿವರ ನೀಡುವುದು)